# “Sri Vijayeendra Theertharu”

ರಾ ಗ – ಶ ಂ ಕ ರಾ ಭ ರ ಣ : ತಾ ಳ – ಆ ದಿ ತಾ ಳ

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡ ಬನ್ನಿ । ಪ ।

ಕಲುಷವೆಂಬ ಪಂಕವನೀಡ್ಯಾಡಿ । ವಿ–
ಮಲ ಹರಿಪದ ತೀರ್ಥದ ಜಲಪಾನ ಮಾಡಿ
ಸಲೆ ಗುರುಮಧ್ವ ಮತಾಂಬುಧಿಯೊಳು
ನಲಿನಲಿದು ಕುಣಿದಾಡುತಲೀ । ೧ ।

ರಮೇಶನ ಧ್ಯಾನವೆಂಬ ಮದವೇರಿ
ಮಮತೆಯೆಂಬ ಕದಳಿ ಕಿತ್ತಾಡಿ
ವಿಮಲ ಶ್ರೀಹರಿಪದರಜ ಶಿರದಿ ಧರಿಸಿ
ಕುಮತಗಳೆಂಬ ತರುಗಳ ಮುರಿಯುತಲೀ । ೨ ।

ಗುರು ಸುರೇಂದ್ರತೀರಥರೆಂಬ
ವರಮಾವಟಿಗನ ಆಜ್ಞೆಯೊಳಿದ್ದು
ಗುರುಪುರಂದರವಿಟ್ಠಲನ ಭಕ್ತಿಯೆಂಬ
ಸರಪಣಿಯೊಳು ನಲಿನಲಿದಾಡುತಲೀ । ೩ ।

# “Sri Vijayeendra Theertharu”

**ರಾ ಗ – ಹಂ ಸ ಧ್ವ ನಿ : ತಾ ಳ – ಆ ದಿ ತಾ ಳ**

ವಿಜಯೀಂದ್ರ ಯತಿಯ ನಾ ಕಂಡೆ । ಮುದಗೊಂಡೆ । ಪ ।
ವಿಜಯ ಡಂಗುರ ಹೊಯಿಸಿ ಗಜವೇರಿ ಬರುತಿಪ್ಪ। ಅ ಪ ।

ನಿಜದಿ ಲಿಂಗಣ್ಣನ ಗೆಲಿದು । ಮಠವನು ಪಡೆದು ।
ಸುಜನರ ಭಯ ಪರಿಹರಿಸುತ ಮೆರೆಯುವ । ೧ ।

ಹರಿಯೇ ಪರನೆಂಬುವ ಸರ್ವ ಶಾಸ್ತ್ರ ಕೋವಿದನ
ಧರಣೀಶನುತ ವ್ಯಾಸಮುನಿಯ ವಿದ್ಯಾಸುತನ । ೨ ।

ಸುಖಮುನಿಯಾಸ್ಥಾನ ರಾಜನ ವರತೇಜನ
ಅಕಳಂಕಮಹಿಮಾಸಿರಿ ಸುರೇಂದ್ರನ ಕುವರನ । ೩ ।

ಚೌಷಷ್ಟಿ ಕಲೆಗಳರಿತವನ ಮಾಯಿಭೀಕರನ ಶ್ರೀಶ
ಗುರುಪುರಂದರವಿಟ್ಠಲನ್ನ ಭಜಿಪನ್ನ । ೪ ।

## ರಾಗ : ಕಾಂಬೋಜಿ

ವಿಜಯೀಂದ್ರ ಗುರುರಾಯರ ಅನುದಿನ ಪೂಜಿಸಿರೈ ಮುದದಿ । ಪ ।

ಯಾಚಕ ಭಕ್ತರ ಕಲ್ಪಭುಜನಾಗಿ ಪುಟ್ಟಿ
ವ್ಯಾಸರಾಯರನುಗ್ರಹ ಪಡೆದು ಜಗದಿ ಮೆರೆವ । ಅ.ಪ. ।

ಮುಂದೆ ಬೊಮ್ಮನಾಗಿ ಪುಟ್ಟುವಾನಂದತೀರ್ಥರ ಗ್ರಂಥಗಳಿಂದ ।
ಚಂದ್ರಿಕಾಚಾರ್ಯರಿಂದ ತಿಳಿದು ನಲಿದು ಲೋಕದೊಳು ಮೆರೆದು ।
ಸುಂದರಾಂಗ ಶ್ರೀಮೂಲರಾಮಚಂದ್ರನ ಚರಣಾರವಿಂದ ।
ಅಂದದಿಂದ ಭಜಿಸುತ್ತ ಬಂದು ಕುಂಭಕೋಣದಿ ನಿಂತ ॥ ೧ ॥

ಪಂಕಜಧರೋತ್ತಮನೆಂಬೋ ಸುಧಾಮೋದಗಳಿಂದ
ಹಿಂಗದೆ ಶಿಷ್ಯರಿಗರುಹುತ ಶ್ರುತಿಸ್ಮೃತಿಗಳಿಂದ ಕೂಡಿ ।
ಶಂಕಿಸುತ ಬರುವ ಅದ್ವೈತಶಂಕರ ಕಿಂಕರರ ಕರಗಳ
ಬಿಂಕದಿ ಮಧ್ವಸಿದ್ಧಾಂತದಂಕುಶದಿಂದ ಸದೆದ ॥ ೨ ॥

ಶೀಲಭಕ್ತಮನಕಮಲಭಾನುಧೇನುವಾಗಿ ಸೇವಕರ
ಪಾಲಿಸಿ ಸಂತಾನ ಕೊಡುವ ನೋಡಿ ಬೇಡಿ ಈಡಿಲ್ಲಧಾಂಗೆ ।
ಇಳಿಯುತ ಕಾಂಚೀಪುರದಾ ನೆಲದಿ ಶೇಷಶಯನನಾದ
ಚಲುವ ವರದರಾಜನ ನೋಡಿ ನಲಿದು ನಲಿದು ಕುಣಿದಾಡುವ ॥ ೩ ॥

# “Sri Vijayeendra Theertharu”

ರಾಗ – ಕಾಂಬೋಜಿ        ತಾಳ – ಝಂಪೆತಾಳ

ವಿಜಯಮೂರುತಿ ಪೊರೆಯೋ ವಿಜಯೀಂದ್ರಯತಿವರ್ಯ ।
ವಿಜಯನಗರೇಶನುತ ಪಾದಪಂಕಜನೇ          । ಪ ।

ಕಾವೇರಿ ತಟನಿಕಟ ಕುಂಭಕೋಣಾವಾಸಿ ।
ಶೈವಯತಿಮತ್ತೇಭ ಪಂಚಾನನ । ಅ.ಪ. ।

ಪರಮಗುರು ಶ್ರೀಮದಾನಂದತೀರ್ಥೋಧ್ಯಾನ
ಪರಶಾಸ್ತ್ರವೆಂಬ ಸತ್ಸಾರಸದಿ ವಿಹರಿಸುವ ।
ಪರಮಹಂಸನೇ ಯಮ್ಮ ಪರಿಕಿಸದಲನವರತ
ಪರವಾದಿಜಯವೀಯೋ ನರಹರಿಯ ಪ್ರಿಯನೇ । ೧ ।

ಹತ್ಹತ್ತು ನಾಲ್ಕು ಸತ್ಕೃತಿಗಳನು ವಿರಚಿಸಿ
ಮಿಥ್ಯಾವಾದವ ಮುರಿದ ಸತ್ಯಶೀಲ ಯತೀಂದ್ರ ।
ಮತ್ತಕಾಶಿನಿಯರಂ ಕಣ್ಣೆತ್ತಿ ನೋಡದಲೆ
ಚಿತ್ತೇಶನಂ ಗೆಲಿದೆ ಸುತ್ತಲೂ ಕಾಯೆಮ್ಮ     । ೨ ।

ಪಂಥವನು ತೊಟ್ಟು ಅಪ್ಪಯ್ಯದೀಕ್ಷಿತರೆಂಬ
ಮತ್ತವಾದಿಯ ಜಯಿಸಿ ಮಧ್ವಮತ ರಕ್ಷಿಸಿದೆ ।
ಪತಿತಪಾವನ ನಮ್ಮ ಕಮಲೇಶನಂಘ್ರಿಯನು
ನುತಿಸುತ್ತಲನವರತ ಭುಕುತರನು ಪೊರೆಯುತಿಹೆ ॥ ೩ ॥

## ರಾಗ – ನಾದನಾಮಕ್ರಿಯೆ ತಾಳ – ಝಂಪೆತಾಳ

ವಿಜಯೀಂದ್ರ ರಾಜಗುರುರಾಜಾಧಿರಾಜ ಮಹಾರಾಜ ಶಿರೋ ರತುನ । ಪ ।
ಭಜಿಸುವೆ ನಿಮ್ಮ ಪಾದಾಂಬುಜವ ಬಿಡದೇ ನಿತ್ಯ ತ್ಯಜಿಸದೇ ಪಾಲಿಸೆನ್ನ ।ಅ.ಪ. ।

ಕ್ಷೋಣಿಯೊಳು ವರಕುಂಭ । ಕೋಣಿಯೋಳು ಸಾರಂಗ।ಪಾಣಿಪಾದಾಂಬುಜವ ।
ಧೇನಿಸಿ ದುರ್ವಾದಿಗಾಳುರ ಹಿಂಡುಗಳ । ವಾಣೀಲಿ ತರಿದಿಯಲ್ಲೊ । ೧ ।

ಮಾನಿನೀಮಣಿ ದುರ್ಮಾನದಿಂದಲಿ ಬಂದು । ಕಾಮಪೊರೈಸೆನ್ನಲು ।
ಮೌನಿಕುಲ್ಲೋತ್ತಂಸಧೇನಿಸಿ ಪುಷ್ಪದಿ । ಮಾನಭಂಗ ಮಾಡಿದೆಯಲ್ಲೋ । ೨ ।

ವಾದಿ ಸಂಬಂದ ದುರ್ವಾದಿ ಲಿಂಗಣ್ಣನ । ಭೇದಿಸಿ ಅವನ ಮಠ ।
ಸಾಧಿಸಿ ಸರ್ವತಂತ್ರ ಸ್ವತಂತ್ರನಾದ ಲಕ್ಷ್ಮೀಧವಗರ್ಪಿಸಿದೆಯಲ್ಲೋ । ೩ ।

ಮಾರನ ಶರಧಿಕ್ಕರಿಸಿ ಮಹ । ಕಾವೇರಿಯತೀರದಲ್ಲಿ ।
ಸೇರಿಸೇವಿಪರಿಷ್ಟ । ಪೂರೈಸಿ ಕಾಶ್ಯಪ । ತೀರದಡದಲ್ಲಿರುವೇ । ೪ ।

ಅಜಭವಾಧಿಪನಾದ । ವಿಜಯಲಕ್ಷ್ಮೀನರಸಿಂಹನ ಭಜಿಸುತ ।
ಸುಜನವಂದಿತ ನಮ್ಮ । ಗುರುಮಧ್ವರಾಯರ । ಮತಸಂಸ್ಥಾಪಕರೇ । ೫ ।

# "Sri Vijayeendra Theertharu"

ರಾಗ – ಶಂಕರಾಭರಣ ತಾಳ – ಆದಿತಾಳ

ಕರವೊಡ್ಡಿ ಬೇಡುವೆ ಗುರು ವಿಜಯೀಂದ್ರ ।
ನೆರೆನಂಬಿದ ಭಕುತನ ಕಾಯೋ ದೊರೆಯೇ । ಪ ।

ಕರಕರೀ ಭವಸಾಗರದಿ ಮುಳುಗುತಿಹೆ ।
ಪೊರೆವರಿನ್ನೊಬ್ಬರನರಿಯೇ ಗುರುವೇ । ಅ.ಪ ।

ಧರಣಿಯೊಳು ಭೂಸುರೋತ್ತಮರಲ್ಲಿ ಜನಿಸಿ । ಸಕ್ರಮದಿ ವಿಪ್ರತ್ವವ ವಹಿಸಿ ।
ಗುರುವ್ಯಾಸ ಮುನಿರಾಯರ ಪಾದಕ್ಕೆರಗಿ ಉರುಮಧ್ವಾಗಮಾರ್ಥವ ಗ್ರಹಿಸಿ ।
ಮರಳಿ ಎರಡು ನಾಲ್ಕು ಭಾರಿಶಾಸ್ತ್ರಗಳರ್ಥ ಗ್ರಹಿಸಿ ಧಾರುಣಿಯೊಳು ಚರಿಸಿ ।
ಅರದೂರಮಾಡಿಪೊರೆವ ಪ್ರಭುಸಲಹೆನ್ನ ನಿರತನಾನೆರಗುವೆ ನಿನ್ನ ಚರಣವಗ್ರಹಿಸಿ।೧।

ಭಾಗವತಾಗ್ರೇಸರಗುರು ಸುರೇಂದ್ರಮುನಿ ಕರಪದುಮ ಸಂಜಾತ ।
ಯೋಗಿವರ್ಯರೇ ನಿಮ್ಮ ಪಾದ ಸೇರಿದ ಜನರಘವ ಕಳೆವ ನಿರ್ಭೀತ ।
ಭೋಗಿಭೂಷಣನೇ ಪರದೈವವೆಂಬಾ ದುರ್ವಾದಿಗಳ ಗೆದ್ದ ಖ್ಯಾತ
ರಾಘವೇಂದ್ರರ ಪರಮ ಗುರುವೇ ನಿಮ್ಮಯ ಪಾದ ನೆರೆನಂಬಿಹೆ ನಿಮ್ಮ ದೂತ ।೨।

ಚರುರಧಿಕಶತಗ್ರಂಥವಿರಚಿತ ದುರ್ಮತಿ ಲಿಂಗಣ್ಣನ ಗೆದ್ದು ಮತವ ।
ಚತುರಧಿಕಷಷ್ಠಿ ವಿದ್ಯಾ ನಿಪುಣನೆ । ರತಿಪತಿಪಿತಗರ್ಪಿಸುವ ।
ಕ್ಷಿತಿಯೊಳು ಪತಿತಪಾವನ ರಘುಪತಿಯೇ ಸರ್ವೋತ್ತಮನೆಂದು ವಾದಿಸುವ ।
ತತುವೇಶರ ಪತಿಪಿತ ಜಯ ಲಕುಮೀಪತಿನರಸಿಂಹನರ್ಚಿಸುವ ॥ ೩ ॥

ರಾಗ – ಆನಂದಭೈರವಿ                ತಾಳ –  ಆದಿತಾಳ

ಎದುರಾರೋ ಯತಿಗೆ ಸಮನ್ಯಾರೋ । ಪ ।
ಪದನಂಬಿದವರ ಪೊರೆವ ಅಸ್ಮದ್ಗುರುವಿಗೆ । ಅ.ಪ. ।

ಜೀವಾನ್ಯದ್ಬ್ರಹ್ಮನೆಂದು ಪೇಳುವುದಕ್ಕೆ।ಜನ್ಮಾದಿಶಾಸ್ತ್ರಯೋನಿಲಕ್ಷನದ್ವಯವೆಂದು ।
ಈವಿಧ ಬೋಧಿಸಿ ಪೊರೆವಂಥ ಗುರುವ ।ಇನ್ಯಾವರ ಕಾಣೆನಾ ಈಕ್ಷಿತಿಯೊಳಗೆ।೧॥

ತತ್ರಾನ್ಯತ್ರಾನ್ಯತ್ರೈವ ಉಭಯತ್ರ ಶಬ್ದ।ಚತುಷ್ಟಯ ಅದರೊಳು ನಾಮಲಿಂಗ ।
ಪುತ್ರಗೆ ಪೇಳುವಂದದಿ ದ್ವೈವಿಧ್ಯವ।ಚಿತ್ತಕ್ಕೆ ಬರುವಂತೆ ಪೇಳಿದ ವಿಜಯೀಂದ್ರಗೆ।೨।

ಮೊದಲು ಪಾದದಿ ಅನ್ಯತ್ರ ಪ್ರಸಿದ್ಧನಾಮ।ಲಿಂಗಾತ್ಮಕ ನಾಮ ಮೂರಲ್ಲು ಭಯತ್ರ।
ಪದವ ಭಜಿಪ ಜಯನರಸಿಂಹನೇ ।ಶ್ರುತಿಲಿಂಗಾದಿ ಅನ್ಯತ್ರೈವ ಪ್ರಸಿದ್ಧನೆಂಬರಿಗೆ।೩।

## ಸಂಗ್ರಹ – ನರಹರಿ ಸುಮಧ್ವ